ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Saturday, the 8th March 1980./Phalguna, 18, 1901. S. E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) was in the Chair]

STARRED QUESTIONS
(to which oral answers were given)

Stoppage of all developmental works by Bangalore City Corporation due to loss of Octroi Revenue.

34. SRI M. CHANDRASHEKAR (Jayanagar) .— Will the Minister for Housing and Urban Development be pleased to state .—

(a) whether it is not a fact that octroi has been abolished in the State from 1-4-1979 and that Bangalore City Corporation is loosing revenue of a sum of Rs. 2½ to 3 lakhs every day ;

(b) if so, what alternative arrangement the Government has made to compensate the loss of revenue being sustained by the B.C.C.;

(c) whether it is a fact that B. C. C. has stopped all developmental work has it as not received any help from the Government ;

(d) if so, how Government would ensure that develepment works go on smoothly ?

SRI DHARM SINGH(Minister for Housing and Urban Develoment)—

(a) Yes.

(b) The Corporation han been compensated so far to the tune of Rs. 6, 37,51,000 for the first three quarters of 1979-80 on the basis of its octroi receipts for the year 1978-79 pending finalisation of a scheme of compensation. The compensation for the fourth quarter will be released shortly.

(c) No

(d) Does not arise in view of reply to clause (b).

ಶ್ರೀ ಎಂ. ಚಂದ್ರಶೇಖರ್ .— ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ, ವರ್ಷಕ್ಕೆ ಎರಡೂವರೆಯಿಂದ ಮೂರು ಲಕ್ಷ ರೂಪಾಯಿಗಳು ನಷ್ಟವಾಗುತ್ತದೆಂದು ಒಪ್ಪಿಕೊಂಡಿದ್ದೀರಿ. ೧೯೭೮-೧೯೭೯ರ ಸಾಲಿನ ಆದಾಯದ ಪ್ರಕಾರ ಕಾರ್ಪೊರೇಷನ್‌ನಲ್ಲಿ ಆಕ್ಟ್ರಾಯಿಂದಾಗಿ ೯.೯ ಕೋಟಿ ರೂಪಾಯಿಗಳ

ಆದಾಯ ಇತ್ತು. ೧೯೭೮-೧೯೭೯ ಸಾಲಿನ ಆಕ್ಟ್ರಾಯಿನಿಂದ ಬಂದ ಆದಾಯದ ಮೇರೆಗೆ ೧೯೭೯-೮೦ನೇ ಸಾಲಿನ ಮೊದಲನೇ ಮೂರು ತ್ರೈಮಾಸಿಕಗಳಿಗೆ ೬.೩೮ ಕೋಟಿ ರೂಪಾಯಿಗಳಷ್ಟು ಮೊಬಲಗುಗಳನ್ನು ಕೊಡಲಾಗಿದೆ. ಇನ್ನು ಮಿಕ್ಕ ೩.೫೩ ಕೋಟಿಯ ಕೊನೆಯ ಕಂತು ಕೊಡಬೇಕಾಗಿದ್ದು, ಅದರಲ್ಲಿ ಎಷ್ಟು ಹಣವನ್ನು ಈಗ ಕೊಡುತ್ತೀರಿ?

ಶ್ರೀ ಧರ್ಮಸಿಂಗ್.— ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ೬.೩೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮಿಕ್ಕ ಹಣದ ಬಗ್ಗೆ ಮೊನ್ನೆ ತಾನೇ ಮಂತ್ರಾಲಯ ಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಅವರು ಒಪ್ಪಿದ್ದಾರೆ. ಉಳಿದ ಕೊನೆಯ ಕಂತನ್ನು ಕಾರ್ಪೊರೇಷನ್‌ಗೆ ಕೊಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್ .— ಉಳಿದಿದ್ದು ಎಂದರೆ, ಈಗ ೬ ಕೋಟಿ ಕೊಟ್ಟಿದ್ದೀರಿ. ಆ ಪ್ರಕಾರ ಕೊನೇ ಕಂತಾಗಿ ಇನ್ನು ೨ ಕೋಟಿ ಕೊಟ್ಟರೆ, ಆಗ ಬರೀ ೮ ಕೋಟಿ ರೂಪಾಯಿ ಆಗುತ್ತದೆ. ೧೯೭೮-೭೯ಕ್ಕೆ ಬಂದ ಆದಾಯ ೯.೯ ಕೋಟಿ ರೂಪಾಯಿಗಳಿದ್ದು ಈ ಆದಾಯ ವರ್ಷ ವರ್ಷ ಹೆಚ್ಚಾಗುತ್ತಾ ಇದ್ದು ಈ ಸಾಲಿಗೆ ಹತ್ತೂವರೆ ಕೋಟಿ ರೂಪಾಯಿ ಆದಾಯ ಬರುತ್ತಿತ್ತು. ಈಗ ಇನ್ನೂ ಎರಡು ಕೋಟಿ ರೂಪಾಯಿ ಕೊನೇ ಕಂತಿನಲ್ಲಿ ಕೊಟ್ಟರೆ ಒಂದೂವರೆ, ಒಂದೂವರೆ ಕೋಟಿ ಕಮ್ಮಿ ಬಿದ್ದು ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗಬಹುದು. ಆದ್ದರಿಂದ ಪೂರ್ತಿ ಎಲ್ಲಾ ಹಣವನ್ನು ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ .— ಈಗ ಉಳಿದಿರುವ ಹಣವನ್ನು ಪೂರ್ತಿಯಾಗಿ ಕೊಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್ .— ಈಗ ಆಕ್ಟ್ರಾಯ್ ಹೋಯಿತು. ಇದರಿಂದ ಕಾರ್ಪೊರೇಷನ್ ಒಂದರಲ್ಲೇ ಅಲ್ಲಾ ಬೇರೇ ಕಡೆಗಳಲ್ಲೂ ನಷ್ಟ ಆಗಿದೆ. ಆದರೆ ಇದರಿಂದಾಗಿ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗಿಲ್ಲವೆಂದು ಹೇಳಿದ್ದಾರೆ. ಈಗ ಕೊಟ್ಟಿರುವ ಹಣದಲ್ಲೇ ಗೊತ್ತಾಗುತ್ತವೆ. ಈಗ ಮಾರ್ಜಿ ತಿಂಗಳು ಬಂದಿದೆ; ಇದುವರೆಗೂ ಕೊನೆಯ ಕಂತಿನ ಹಣವನ್ನು ಕೊಟ್ಟಿರುವುದಿಲ್ಲ. ಈ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಜಯನಗರದಲ್ಲಿ ಒಂದು ಜನರಲ್ ಆಸ್ಪತ್ರೆ ಇದೆ. ಇದು ಸುಮಾರು ೨೦೦ ಹಾಸಿಗೆಗಳುಳ್ಳ ಆಸ್ಪತ್ರೆ. ಆಕ್ಟ್ರಾಯ್ ಕಾರಣದಿಂದಾಗಿ ಇದನ್ನು ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಸರ್ಕಾರಕ್ಕೆ ನೀವೇ ಇದನ್ನು ವಹಿಸಿಕೊಳ್ಳಿ ಎಂದರೆ ಸರ್ಕಾರ ಇದನ್ನು ತಿರಸ್ಕೃತ ಮಾಡಿದೆ ಎಂದು ಹೇಳುತ್ತಿದ್ದಾರೆ. ಈ ಒಂದು ಪರಿಸ್ಥಿತಿ ಇರುವಾಗ ಸರ್ಕಾರದವರೇ ನಗರದ ಅಭಿವೃದ್ಧಿ ಕಾರ್ಯಗಳನ್ನು ಏನು ಮಾಡಬೇಕಾಗಿದೆ. ಆ ಬಗ್ಗೆ ಗಮನಹರಿಸಿ, ಆಸ್ಪತ್ರೆಯನ್ನು ಸರ್ಕಾರ ದವರೇ ವಹಿಸಿಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿರುವರೇ ?

ಶ್ರೀ ಧರ್ಮಸಿಂಗ್ .— ಈಗ ಆಕ್ಟ್ರಾಯ್ ತೆಗೆದ ನಂತರ ಬರಬೇಕಾಗಿದ್ದ ವರಮಾನ ಏನಿತ್ತು. ಅದನ್ನು ಈಗ ಸರ್ಕಾರ ಕೊಡುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲೂ ಕೂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿಲ್ಲಿಸಿಲ್ಲ. ೧೯೭೬-೭೭ನೇ ಸಾಲಿನಲ್ಲಿ ಕಾರ್ಪೊರೇಷನ್ ಅಭಿವೃದ್ಧಿ ಕಾರ್ಯಕ್ರಮ ಗಳಿಗೋಸ್ಕರ ೫.೯೫ ಕೋಟಿ ರೂಪಾಯಿಗಳನ್ನು ವಿಚ್ರ್ ಮಾಡಿದೆ ೧೯೭೭-೭೮ನೇ ಸಾಲಿನ ೫.೦೩ ಕೋಟಿ ರೂಪಾಯಿಗಳನ್ನು, ೧೯೭೮-೭೯ನೇ ಸಾಲಿನಲ್ಲಿ ೫.೫೬ ಕೋಟಿ ರೂಪಾಯಿಗಳನ್ನು ವಿಚ್ರ್ ಮಾಡಿದ್ದು, ಈಗಾಗಲೇ ೧೯೭೯-೮೦ರ ಸಾಲಿನಲ್ಲಿ ೫.೯೦ ಕೋಟಿ ರೂಪಾಯಿಗಳನ್ನು ವಿಚ್ರ್ ಮಾಡಿದೆ. ಇದರಿಂದಾಗಿ ಯಾವ ಡೆವಲಪ್‌ಮೆಂಟ್ ವರ್ಕ್ಸ್‌ಗೂ ತೊಂದರೆಯಾಗಿಲ್ಲ. ಮತ್ತು ಈಗಾಗಲೇ ಅಧಿಕ ವಾಗಿ ೫೦ ಲಕ್ಷ ರೂಪಾಯಿಗಳನ್ನು ವಿಚ್ರ್ ಮಾಡಿದೆ. ಆಕ್ಟ್ರಾಯನ್ನು ತೆಗೆದು ಹಾಕಿದ ಮೇಲೆ ಸರ್ಕಾರ ಅದನ್ನು ಗಮನದಲ್ಲಿ ಇಟ್ಟು ಕೊಂಡು, ನಗರಸಭೆಗಳಿಗೆ ಹಣವನ್ನು ಒದಗಿಸುತ್ತಿದ್ದೇವೆ. ಎಲ್ಲಾ ಅಭಿವೃದ್ಧಿ ಕಾರ್ಯಗಳು ನಡೆಯುತ್ತಾ ಇವೆ. ಇನ್ನು ಮಾನ್ಯ ಸದಸ್ಯರು ಜಯನಗರದ ಹಾಸ್ಪೆಟಲ್ ಬಗ್ಗೆ ಹೇಳಿದರು. ಅದರ ಬಗ್ಗೆ ನಾನು ವಿಚಾರ ಮಾಡಿ ಹೇಳುತ್ತೇನೆ.

ಶ್ರೀ ಪಿ ರಾಮ್ಮದೇವ್ .— ಈ ಆಕ್ಟ್ರಾಯ್ ತೆರಿಗೆಯನ್ನು ತೆಗೆದು ಹಾಕಿರುವಾಗ ಕೇಂದ್ರ ಸರ್ಕಾರ ದವರಿಂದ ಶೇಕಡ ೫೦ರಷ್ಟು ಆದಕ್ಕೆ ಹಣ ಬರುತ್ತದೆ ಎನ್ನುತಕ್ಕ ಮಾತನ್ನು ಹೇಳಿದ್ದೀರಿ. ಈಗ ಇದರ ಬಗ್ಗೆ ಎಷ್ಟು ಹಣ ಕೇಂದ್ರ ಸರ್ಕಾರದಿಂದ ಬಂದಿದೆ ? ಬಾರದೇ ಇದ್ದರೇ ಕಾರಣವೇನು ? ಏತಕ್ಕೆ ಬಂದಿಲ್ಲ ವೆಂದು ಹೇಳುತ್ತೀರಾ ?

ಶ್ರೀ ಧರ್ಮಸಿಂಗ್ .— ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಡಿಟೇಲ್ಸ್ ಕೊಡುತ್ತೇವೆ.

ಶ್ರೀ ಪಿ. ರಾಮಭಟ್.—ಈ ಆಕ್ಟ್ಪ್ರಯೋಜನವನ್ನು ತೆಗೆದು ಹಾಕುವುದರಿಂದ ಮುನಿಸಿಪಾಲಿಟಿಗಳಿಗೂ ಹಣವನ್ನು ಕೊಡತಕ್ಕ ಯೋಜನೆ ಸರ್ಕಾರದಲ್ಲಿ ಇದೆಯೆ ?

ಶ್ರೀ ಧರ್ಮಸಿಂಗ್ .--- ನಗರ ಸಭೆಗಳಿಗೂ ಕೂಡ ಹಣವನ್ನು ಕೊಡುತ್ತಿದ್ದೇವೆ.

SRI C. M. ARMUGHAM .— Is i possible for the Government to say how much money was compensated to the several municipalities in the State inculding Corporations ? The Hon. Minister might have by now realised that with the abolition of octroi which was the main income of the Municipalities,these municipalities are not having enough money to disburse the salary to their employees—Bangalore may be an exception.

SRI DHARM SINGH .— We have decided in consultation with the Finance Department for releasing the money to all the Municipalities.

SRI A. LAKSHMI SAGAR.—May I know from the Minister the monthly payments that are being made to the Bangalore Corporation ; whether the three quarterly payments made to the Corporation are treated as grants or as loans ?

SRI DHARM SINGH .— The compensation amount paid is not paid as loan.

Interruptions in Electric Supply in Bijapur City

50 SRI S. S. ARAKERI (Balloli).—Will the Chief Minister be pleased to state .—

(a) whether Government is aware that there are frequent interruptions in electric supply in Bijapur City;

(b) whether Government is also aware that on account of frequent interruptions, the people of Bijapur City are experiencing great hardship and with the result the antisocial elements have become active ;

(c) what measures the Government have taken or propose to take to ensure that there is regular electric supply to the said City ?

SRI R. GUNDU RAO (Chief Minister).—

(a) There were interruptions in March-April 1979.

(b) Yes, during the above period.

(c) The load shedding has stopped completely on L. T. installations and the energy cut verying from 40% to 60% is imposed on the H. T. installations above 250 KVA Now the interruptions in power supply are minimised and the power supply is being maintained satisfactoraily.